

# ಮಳೆಗಾಲದ ಸ್ನೇಹಿತರು





ಅವಧಿಗೆ ಮುನ್ನವೇ ಕಾವು ಹುಟ್ಟಿಸಿರುವ ಬೇಸಿಗೆಯ ಬಿಸಿಲಿಗೆ ಒಣಗಿ ಮರುಭೂಮಿಯಂತಾಗಿರುವ ಮನೆಯ ಪಕ್ಕದ ಖಾಲಿ ನಿವೇಶನ ಮಳೆಗಾಲ ಬಂತೆಂದರೆ ಸಾಕು, ಹಠಾತ್ತನೆ ಹಸಿರಿನಿಂದ ನಳನಳಿಸುತ್ತದೆ. ಅದೆಲ್ಲಿ ಅಡಗಿರುತ್ತವೆಯೋ, ಅಷ್ಟೊಂದು ಬಗೆ ಬಗೆಯ ಬೀಜಗಳು! ಎಲ್ಲವೂ ಮೊಳೆತು, ಗಿಡವಾಗಿ ಬೆಳೆಯುತ್ತವೆ. ಒಂದೆರಡಲ್ಲ, ಹತ್ತಾರು ಬಗೆಯ ಗಿಡ ಬಳ್ಳಿಗಳು.

ಅವುಗಳ ನಡುವೆಯೇ ಅವೆಲ್ಲಿದ್ದವೋ ಎಷ್ಟೊಂದು ಕೀಟಗಳು ಒಮ್ಮೆಗೆ ಅಲ್ಲಿ ಪ್ರತ್ಯಕ್ಷವಾದವು. ಇಲ್ಲೊಂದು ಹಸಿರುತಾಣ ರೂಪುಗೊಂಡದ್ದು ಅವುಗಳಿಗೆ ಅದು ಹೇಗೇ ತಿಳಿಯಿತೋ! ಮಳೆಗಾಲದ ಮುನ್ನ ಸನಿಹದಲ್ಲಿ ಎಲ್ಲೂ ಕಾಣಿಸದ ವೈವಿಧ್ಯಮಯ ಕೀಟಗಳು ಅಲ್ಲಿ ಪ್ರತ್ಯಕ್ಷವಾದವು. ಎಲೆ, ಗಿಡ, ಹೂವುಗಳ ಮೇಲೆ ವಿರಾಜಮಾನವಾದವು. ಆಗೊಮ್ಮೆ ಈಗೊಮ್ಮೆ ದಾರಿ ತಪ್ಪಿದಂತೆ ಮನೆಯೊಳಕ್ಕೂ ನುಗ್ಗಿದವು.

ಬಗೆಬಗೆಯ ಕೀಟಗಳು, ಮಿಡತೆಗಳು, ಕೆಲವು ಬಗೆಯ ಚಿಟ್ಟೆಗಳು ಮಳೆಗಾಲದಲ್ಲಿ ಸಾಮಾನ್ಯವಾಗಿ ಕಣ್ಣಿಗೆ ಬೀಳುತ್ತಲೇ ಇದ್ದರೂ, ಈ ಬಾರಿ ನನ್ನ ಗಮನ ಸೆಳೆದದ್ದು ಅತೀ ಪುಟ್ಟದಾದ, ತರಹೇವಾರಿ ರಂಗು ತುಂಬಿದ ಪುಟಾಣಿ ಜೀವಿಗಳು. ಕೆಲವಂತೂ ಮಿರುಗುವ ಬಣ್ಣ ತುಂಬಿಕೊಂಡಿದ್ದವು. ಒಂದು ಪುಟ್ಟ ಜೇಡವಂತೂ ಬೆರಳೇರಿ ಕೂತು, ಬಹಳ ಕಾಲ ಅಲ್ಲಿಂದ ಕದಲಲೇ ಇಲ್ಲ. ಈ ವಿಶಿಷ್ಟ ಬಣ್ಣಗಳ ಪುಟಾಣಿ ಕೀಟಗಳನ್ನು ಈ ಸಲ ಕ್ಯಾಮೆರಾದಲ್ಲಿ ಸೆರೆಹಿಡಿಯುವ ಪ್ರಯತ್ನ ನಡೆಸಿದೆ.

ಮಳೆಗಾಲ ಮುಗಿದ ಎರಡೇ ತಿಂಗಳಲ್ಲಿ ನಿವೇಶನದ ಮಾಲೀಕರು ಎಲ್ಲಾ ಪೊದೆಗಳನ್ನು ಕಡಿಸಿದರು. ಒಂದೇ ತಿಂಗಳಲ್ಲಿ ಮತ್ತೆ ಮಳೆ ಬಂತು. ನಿವೇಶನ ಮತ್ತೆ ಹಸಿರೊಡೆಯಿತು. ಆದರೆ ಹಿಂದಿನಂತಷ್ಟಲ್ಲ. ಆ ಹಸಿರಿನಲ್ಲೂ ಒಂದು ರೀತಿಯ ಪೇಲವತೆಯಿತ್ತು! ಮಳೆಗಾಲದ ಲವಲವಿಕೆಯಿರಲಿಲ್ಲ. ಅದು ಕೀಟಗಳಿಗೂ ಅರಿವಾಯಿತೇನೋ..! ಮಳೆಗಾಲದಲ್ಲಿ ಕಂಡುಬಂದ ಯಾವ ಕೀಟಗಳೂ ಕಾಣಿಸಲಿಲ್ಲ.

ಬಹುಶಃ ಅವೆಲ್ಲ ಇನ್ನೊಂದು ಮಳೆಗಾಲಕ್ಕಾಗಿ ಕಾಯುತ್ತಿದ್ದಾವೇನೋ! ನಾನೂ ಈ ಹಳೆಯ ಪುಟಾಣಿ ಗೆಳೆಯರನ್ನು ಭೇಟಿಯಾಗಲು ಮುಂದಿನ ಮಳೆಗಾಲಕ್ಕೇ ಕಾಯಬೇಕು. ಅಂದ ಹಾಗೆ, ಮೈಥುನದಲ್ಲಿ ತೊಡಗಿದ್ದ ಪುಟ್ಟ ಕೀಟಗಳೆರಡು ಕ್ಯಾಮರಾಕ್ಕೆ ಸಿಲುಕಿದ್ದವು. ಅವುಗಳಿಗೆ ಮರಿಯಾಯಿತೋ.. ಇಲ್ಲವೋ..? ಕುತೂಹಲ ತಣಿಸುವವರಾರು?

■ **ಚಿತ್ರ- ಬರಹ: ಗಾಯತ್ರಿ ನಾಯಕ್**